# ದೈವೀ ವೀಣೆ-ಮಾನುಷೀ ವೀಣೆ

ಶಶಿಕಲಾ ಶ್ರೀಧರ್

*ಬ್ರಹ್ಮಾಂಡದಲ್ಲಿರುವ ಸಕಲ ತತ್ತ್ವಗಳೂ ಪಿಂಡಾಂಡವೆನಿಸುವ ಮಾನವಶರೀರದಲ್ಲಿರುವುದರಿಂದ ವೀಣೆಯ ತತ್ತ್ವಗಳೂ ಮಾನವಶರೀರದಲ್ಲಿ ಇವೆ ಎಂಬ ಪ್ರತಿಪಾದನೆಯನ್ನು ವ್ಯಕ್ತಪಡಿಸಿರುವ ಶ್ರೀಮತಿ ಶಶಿಕಲಾ ಶ್ರೀಧರ್ ಅವರು ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.*

ನಾದೋತ್ಪತ್ತಿಕರಂ ದೇವಂ ನಮಾಮಿ ಪ್ರಣವಾಕೃತಿಂ ।
ಮೂಲಾಧಾರಸ್ಥಿತಂ ಜ್ಞಾನಮೋಕ್ಷಸಿದ್ಧಿಪ್ರದಂ ಗಜಮ್ ॥
ನಾದವಿದ್ಯಾಪ್ರವೀಣಾಂ ತಾಂ ರಾಗಭಾವಲಯಾತ್ಮಿಕಾಂ ।
ದೇವೀಂ ವಾಗೀಶ್ವರೀಂ ವಂದೇ ವೀಣಾವಾದನತತ್ಪರಾಮ್ ॥

"ನಾದೋತ್ಪತ್ತಿಕರನೂ ಪ್ರಣವಕಾರನೂ ಮೂಲಾಧಾರಸ್ಥಿತನೂ ಜ್ಞಾನ ಮೋಕ್ಷಗಳನ್ನು ಕೊಡತಕ್ಕವನೂ ಆದ ವಿಘ್ನೇಶ್ವರನಿಗೆ ನಮಸ್ಕರಿಸುತ್ತೇನೆ."

"ನಾದವಿದ್ಯಾಪ್ರವೀಣಳೂ, ರಾಗಭಾವಲಯಾತ್ಮಿಕಳೂ, ವೀಣಾವಾದನತತ್ಪರಳೂ ಆದ ವಾಗೀಶ್ವರೀ ದೇವಿ ಶ್ರೀಸರಸ್ವತಿಗೆ ನಮಸ್ಕರಿಸುತ್ತೇನೆ."

## ನಾದಮೂಲ—ವೇದಮೂಲ

ಆದಿಯಲ್ಲಿ ಪರಮಾತ್ಮನು ತನ್ನ ಸಂಕಲ್ಪಮಾತ್ರದಿಂದ ನಾದಬ್ರಹ್ಮವನ್ನು ಸೃಷ್ಟಿಸಿದನು. ಇದೇ ಓಂಕಾರನಾದ. ಈ ಓಂಕಾರದಿಂದ ಚತುರ್ವೇದಗಳಾದ ಋಕ್, ಯಜುಸ್, ಸಾಮ, ಅಥರ್ವ ಎಂಬ ವೇದಗಳೂ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥವೇದವೆಂಬ ನಾಲ್ಕು ಉಪವೇದಗಳೂ ಕ್ರಮವಾಗಿ ಹುಟ್ಟಿದವು. ಸಾಮವೇದದ ಉಪವೇದವಾದ ಗಾಂಧರ್ವವೇದವೇ ಸಂಗೀತ. ಆದುದರಿಂದ ಉಳಿದ ವೇದಗಳಂತೆಯೇ ಇದು ಮೋಕ್ಷದಾಯಕ.

**ಗೀತಂ** ವಾದ್ಯಂ ಚ ನೃತ್ಯಂ ಚ ತ್ರಯಂ **ಸಂಗೀತಮುಚ್ಯತೇ** — "ಗೀತ, ವಾದ್ಯ, ನೃತ್ಯ ಈ ಮೂರೂ ಸೇರಿ ಸಂಗೀತವಾಗುತ್ತದೆ" ಎಂದು ಭರತಾದಿ ಮಹಾಮುನಿಗಳು ಬಹಳ ಪೂರ್ವದಲ್ಲಿಯೇ ಹೇಳಿದ್ದಾರೆ. ಈ ಗೀತ ವಾದ್ಯ ನೃತ್ಯಗಳು ನಾದಾಧೀನವಾಗಿವೆ. ಆದ್ದರಿಂದ ಸಂಗೀತಕ್ಕೆ ಮೂಲಾಧಾರವಾದುದು ನಾದ. "ನ" ಎಂಬ ಶಬ್ದವು ಪ್ರಾಣ ಅಥವಾ ವಾಯು ಎಂಬುದಾಗಿಯೂ "ದ" ಎಂಬ ಶಬ್ದವು ಅಗ್ನಿ ಎಂಬುದಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಪ್ರಾಣಾಗ್ನಿ ಸಂಯೋಗದಿಂದ ನಾದದ ಉತ್ಪತ್ತಿಯಾಯಿತು. ಗೀತವೂ ನಾದಾತ್ಮಕವು, ವಾದ್ಯವೂ ನಾದಾತ್ಮಕವು. ಇವೆರಡೂ ಸೇರಿರುವ ನಾಟ್ಯವೂ ನಾದಾತ್ಮಕವು. ನಾದಯೋಗಿ ಶ್ರೀ ತ್ಯಾಗರಾಜರ ನೂರಾರು ಕೃತಿಗಳಲ್ಲಿ ಈ ಅಂತರ್ನಾದದ ಸ್ಮರಣೆಯಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇವರ ಸಾರಮತಿರಾಗದ "ಮೋಕ್ಷಮು ಗಲದಾ" ಎಂಬ ಕೃತಿಯಲ್ಲಿ

ಪ್ರಾಣಾನಲ ಸಂಯೋಗ ಮುವಲ್ಲ ಪ್ರಣವನಾದ
ಸಪ್ತಸ್ವರಮುಲೈ ಪರಗ.....

"ಪ್ರಾಣಾಗ್ನಿ ಸಂಯೋಗದಿಂದ ಹುಟ್ಟಿದ ಪ್ರಣವನಾದ ಮತ್ತು ಸಪ್ತಸ್ವರಗಳನ್ನು ಪ್ರಕಾಶ ಪಡಿಸುತ್ತಾ ವೀಣಾವಾದನ ಲೋಲನಾಗಿರುವ ಶಿವನ ಮನೋಧರ್ಮವನ್ನು ತಿಳಿಯದ ಸಂಗೀತ ಜ್ಞಾನವಿಹೀನರಿಗೆ ಮೋಕ್ಷವುಂಟೇ?" ಎಂದು ಕೇಳುತ್ತಾರೆ.

## ಆಹತ — ಅನಾಹತ

ಈ ನಾದದಲ್ಲಿ ಎರಡು ಬಗೆ: ಆಹತನಾದ ಮತ್ತು ಅನಾಹತ ನಾದ. ಯೋಗಿಗಳು ಇಂದ್ರಿಯಗಳನ್ನು ಅಂತರ್ಮುಖವಾಗಿರಿಸಿ ಧ್ಯಾನ ಮಾಡುತ್ತಾ ಪರಮಾತ್ಮನಲ್ಲಿ ತಾದಾತ್ಮ್ಯ ಹೊಂದಿದಾಗ ಕೇಳುವ ಅತಿ ಸೂಕ್ಷ್ಮವಾದ ನಾದ ಅನಾಹತನಾದ. ತಾನೇತಾನಾಗಿ ಹೊರಡುವ ಈ ಅಂತರ್ನಾದವೇ ಪ್ರಣವ. ಶ್ರುತ್ಯಾದಿಗಳ ಮೂಲಕ ಸಮಸ್ತ ಗೇಯಕಲ್ಪನೆಗಳನ್ನು ಬಾಹ್ಯೇಂದ್ರಿಯಗಳ ಮೂಲಕ ಅನುಸಂಧಾನ ಮಾಡಲು ಯೋಗ್ಯವೂ, ಮನೋರಂಜಕವೂ ಭವ ಭಂಜಕವೂ ಆದ ನಾದವೇ ಆಹತನಾದ. ಈ ಆಹತನಾದದಲ್ಲಿ ಐದು ಬಗೆ:

| | |
|---|---|
| ೧) **ನಖಜ** | ಉಗುರಿನಿಂದ ಮೀಟಬೇಕಾದ ವೀಣಾದಿ ವಾದ್ಯಗಳು. |
| ೨) **ವಾಯುಜ** | ಕೊಳಲು ಮುಂತಾದ ಗಾಳಿ ವಾದ್ಯಗಳು |
| ೩) **ಚರ್ಮಜ** | ಮೃದಂಗಾದಿ ಚರ್ಮವಾದ್ಯಗಳು. |
| ೪) **ಲೋಹಜ** | ಝಲ್ಲರಿ ಮುಂತಾದ ಲೋಹ ಸಂಬಂಧ ತಾಳವಾದ್ಯಗಳು. |
| ೫) **ಶರೀರಜ** | ಶರೀರದಿಂದ ಉತ್ಪತ್ತಿಯಾಗತಕ್ಕ ನಾದ. |

## ಸಪ್ತಸ್ವರಗಳು

ಪೂರ್ವದಲ್ಲಿ ಪಾರ್ವತೀದೇವಿಯು ಮಹಾದೇವನಾದ ಶಂಕರನನ್ನು ಕುರಿತು ಸುಖಪ್ರದವಾದ ಸಂಗೀತ ಶಾಸ್ತ್ರದ ಬಗ್ಗೆ ಹೇಳಬೇಕೆಂದು ಪ್ರಾರ್ಥಿಸಿದಾಗ ಶ್ರೀಶಂಕರನು ತನ್ನ ಪಂಚ ಮುಖಗಳಿಂದ ಸೃಷ್ಟಿಯಾದ ಸಂಗೀತದ ಬಗ್ಗೆ ಹೀಗೆ ಹೇಳುತ್ತಾನೆ:

| ಶ್ರೀಮುಖ | ತತ್ತ್ವ | ಸ್ವರ | ವಾದ್ಯ |
|---|---|---|---|
| ೧. ಸದ್ಯೋಜಾತ | ಪೃಥ್ವಿ | ಗಾಂಧಾರ | ಮೃದಂಗಾದಿ ಚರ್ಮವಾದ್ಯಗಳು |
| ೨. ವಾಮದೇವ | ಜಲ | ಧೈವತ | ಶಂಖಾದಿ ಜಲ ಸಂಬಂಧ ವಾದ್ಯಗಳು |
| ೩. ಅಘೋರ | ಅಗ್ನಿ | ಷಡ್ಜ,ರಿಷಭ | ಘಂಟಾದಿ ಲೋಹ ಸಂಬಂಧ ವಾದ್ಯಗಳು |
| ೪. ತತ್ಪುರುಷ | ವಾಯು | ಪಂಚಮ | ವೇಣು ಮುಂತಾದ ಮರುದ್ವಾದ್ಯಗಳು |
| ೫. ಈಶಾನ | ಆಕಾಶ | ನಿಷಾದ, ಮಧ್ಯಮ | ವೀಣಾದಿ ತಂತೀ ವಾದ್ಯಗಳು. |

ಹೀಗೆ ಶಂಕರನ ಪಂಚಮುಖಗಳಿಂದ ಪಂಚಭೂತಗಳೂ, ಸಪ್ತ ಸ್ವರಗಳೂ, ಪಂಚವಿಧವಾದ್ಯಗಳೂ ಉತ್ಪತ್ತಿಯಾದುವೆಂದು ಪ್ರತೀತಿ. ಇವನ್ನೇ ಶ್ರೀತ್ಯಾಗರಾಜರು ಚಿತ್ತರಂಜನೀ ರಾಗದ ತಮ್ಮ "ನಾದ ತನುಮನಿಶಂ" ಎಂಬ ಕೃತಿಯಲ್ಲಿ

**ಸದ್ಯೋಜಾತಾದಿ ಪಂಚವಕ್ತ್ರಜ**
**ಸರಿಗಮಪಧನೀ ವರ ಸಪ್ತಸ್ವರ.....**
**ನಾದ ತನುಮನಿಶಂ ಶಂಕರಂ**

ಎಂಬುದಾಗಿ ನಾದತನುವಾದ ಶ್ರೀಶಂಕರನನ್ನು ಮನಸ್ಸಿನಿಂದಲೂ ಶಿರಸ್ಸಿನಿಂದಲೂ ವಂದಿಸುತ್ತಾರೆ.

## ಅತಿಪ್ರಾಚೀನ ವಾದ್ಯ ವೀಣೆ

ಶ್ರೀಶಂಕರನ ಶ್ರೀಮುಖಗಳಿಂದ ಹೊರಟ ಪಂಚವಾದ್ಯಗಳು ಶಂಖ, ಘಂಟೆ, ಮೃದಂಗ, ವೇಣು ಮತ್ತು ವೀಣೆ. ಇವುಗಳಲ್ಲಿ ಅತ್ಯಂತ ಮುಖ್ಯವಾದ ವೀಣೆ ಮೋಕ್ಷಕ್ಕೆ ಸಾಧನ ಎಂಬುದಾಗಿ ಯಾಜ್ಞವಲ್ಕ್ಯ ಸ್ಮೃತಿಯ ಈ ಶ್ಲೋಕವು ಕೊಂಡಾಡಿದೆ:

**ವೀಣಾವಾದನತತ್ತ್ವಜ್ಞಃ ಶ್ರುತಿಜಾತಿವಿಶಾರದಃ |**
**ತಾಲಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂ ನಿಯಚ್ಛತಿ ||**

"ವೀಣಾವಾದನ ತತ್ತ್ವವನ್ನು ತಿಳಿದವನೂ ಶ್ರುತಿಜಾತಿ ಮುಂತಾದುವನ್ನು ಅರಿತವನೂ ತಾಳಜ್ಞಾನವುಳ್ಳವನೂ ಪ್ರಯಾಸವಿಲ್ಲದೆಯೇ ಮೋಕ್ಷಮಾರ್ಗದಲ್ಲಿ ನಡೆಯುವನು." ವೀಣೆ ಅತ್ಯಂತ ಪ್ರಾಚೀನ ವಾದ್ಯ. ಈ ವೀಣೆಯ ಬಗ್ಗೆ ನಮಗೆ ದೊರೆತಿರುವ ಅತ್ಯಂತ ಪ್ರಾಚೀನ ಗ್ರಂಥವೆಂದರೆ ತೈತ್ತಿರೀಯ ಬ್ರಾಹ್ಮಣ. ಈ ತೈತ್ತಿರೀಯ ಬ್ರಾಹ್ಮಣವು ಅಶ್ವಮೇಧವೇ ಮುಂತಾದ ಯಾಗಗಳಲ್ಲಿ ಗಾಯನವೂ ವೀಣಾವಾದನವೂ ನಡೆಯಬೇಕೆಂದು ಹೇಳುತ್ತದೆ. ಐತರೇಯ ಆರಣ್ಯಕದಲ್ಲಿ ವೀಣೆಯ ವರ್ಣನೆಯು ವಿವರವಾಗಿ ಬಂದಿದೆ. ಸುಮಾರು ಹತ್ತು ವಿಧದ ವೀಣೆಗಳು ಯಜ್ಞಯಾಗಾದಿ ಕಾರ್ಯಗಳಲ್ಲಿ ಪ್ರಯುಕ್ತವಾಗುತ್ತಿದ್ದವೆಂದು ತಿಳಿದುಬರುತ್ತದೆ. ಇವುಗಳೇ ಅಘಾಟೀ, ಘಾಟಲಿಕಾ, ಪಿಚ್ಛೋಲಾ, ಕರ್ಕರೀ, ಸ್ತಂಬಲ ವೀಣಾ, ತಾಲುಕ ವೀಣಾ, ಅಲಾಬುವೀಣಾ, ಕಪಿಶೀರ್ಷ್ಣೀ, ವಕ್ರಾ ಮತ್ತು ಶೀಲ. ನಾರದ ಮಹರ್ಷಿಗಳು ತಮ್ಮ "ಸಂಗೀತ ಮಕರಂದ"ದಲ್ಲಿ ಹತ್ತೊಂಬತ್ತು ವೀಣೆಗಳ ಹೆಸರುಗಳನ್ನು ಹೇಳಿದ್ದಾರೆ:

**ಕಚ್ಛಪೀ ಕುಬ್ಜಿಕಾ ಚಿತ್ರಾ ವಹಂತೀ ಪರಿವಾದಿನೀ**
**ಜಯಾ ಘೋಷವತೀ ಜ್ಯೇಷ್ಠಾ ನಕುಲೀ ಚೇತಿ ಕೀರ್ತಿತಾ|**
**ಮಹತೀ ವೈಷ್ಣವೀ ಬ್ರಾಹ್ಮೀ ರೌದ್ರೀ ಕೂರ್ಮೀ ಚ ರಾವಣೀ**
**ಸರಸ್ವತೀ ಕಿನ್ನರೀ ಚ ಸೈರಂಧ್ರೀ ಘೋಷಕಾ ತಥಾ ||**

ಹರಿಪಾಲನ "ಸಂಗೀತ ಸುಧಾರಕ" ಎಂಬ ಗ್ರಂಥದಲ್ಲಿ ಬ್ರಹ್ಮವೀಣಾ, ಆಲಾಪಿನೀ, ಕಿನ್ನರೀ, ಕೈಲಾಸವೀಣಾ, ಪಿನಾಕೀ, ಆಕಾಶವೀಣಾ ಎಂಬ ಆರುಬಗೆಯ ವೀಣೆಗಳ ಪ್ರಸ್ತಾಪ ಬಂದಿದೆ. ತಂತಿಗಳ ಸಂಖ್ಯೆಗನುಗುಣವಾಗಿ ಏಕತಂತ್ರೀ, ತ್ರಿತಂತ್ರೀ, ಸಪ್ತತಂತ್ರೀ, ಶತತಂತ್ರೀ ಮುಂತಾದ ಹೆಸರುಗಳೂ ಹಿಂದೆ ಬಳಕೆಯಲ್ಲಿದ್ದವು. "ಸಂಗೀತರತ್ನಾಕರ" ಎಂಬ ಗ್ರಂಥದಲ್ಲಿ ಹನ್ನೊಂದು ವೀಣೆಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ: ಏಕತಂತ್ರೀ, ನಕುಲ, ತ್ರಿತಂತ್ರಿಕಾ, ಚಿತ್ರಾ, ವೀಣಾ, ವಿಪಂಚೀ, ಮತ್ತಕೋಕಿಲಾ, ಆಲಾಪಿನೀ, ಕಿನ್ನರೀ, ಪಿನಾಕೀ ಮತ್ತು ನಿಶ್ಶಂಕವೀಣಾ.

ವೀಣೆ ಅತಿ ಪವಿತ್ರವಾದ ವಾದ್ಯ. ಇದು ನಮ್ಮ ದೇಶದ ಸಂಸ್ಕೃತಿಯ ಪ್ರತೀಕವಾಗಿದೆ. ವಾಗ್ದೇವಿ ಸರಸ್ವತಿಯ ಕರಕಮಲಗಳನ್ನು ಅಲಂಕರಿಸಿರುವ ದೈವೀವೀಣೆ, ಮಾನುಷೀವೀಣೆಯ ರೂಪದಲ್ಲಿ ಮೂಡಿಬಂದ ಬಗೆ, ಎಲ್ಲ ರಾಗಗಳನ್ನು ಹೊರಡಿಸುವ ಪರಿಪೂರ್ಣ ಮೇಳವನ್ನು ಹೊಂದಿದ ಬಗೆ, ಇವುಗಳಿಗೆ ಕಾರಣರಾದ ಪ್ರಸಿದ್ಧ ವಾಗ್ಗೇಯಕಾರರು, ವೀಣಾವಾದನ ತತ್ತ್ವಜ್ಞರು, ಶ್ರುತಿತಾಳ ವಿಶಾರದರು—ಇವುಗಳೆಲ್ಲವನ್ನೂ ಅರಿಯಬೇಕಾದುದು ಪ್ರತಿಯೊಬ್ಬ ಸಂಗೀತ ಪ್ರೇಮಿಯ ಕರ್ತವ್ಯ. ಈ ನಾದಯೋಗಿಗಳೆಲ್ಲರನ್ನೂ ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ನಮ್ಮ ಭಕ್ತಿ ನಮನಗಳನ್ನು ಸಲ್ಲಿಸಬೇಕು.

## ವೀಣೆಯ ಹುಟ್ಟು ಮತ್ತು ಬೆಳವಣಿಗೆ

ಭರತಮುನಿಯ ಕಾಲದಲ್ಲಿ ಸ್ವರ ಪ್ರಮಾಣಗಳನ್ನೂ, ಅವುಗಳಲ್ಲಿ ಅಂತರ್ಗತವಾದ ಶ್ರುತಿಪ್ರಮಾಣಗಳನ್ನೂ ನಿರ್ದೇಶಿಸಲು ವೀಣೆಯ ತಂತಿಯನ್ನೇ ಬಳಸುತ್ತಾ ಬರುತ್ತಿದ್ದುದರಿಂದ ಅದು ಒಂದು ಶಾಸ್ತ್ರೀಯ ಪರಂಪರೆಯನ್ನೇ ನಿರ್ಮಿಸಿತು. ಒಂದೇ ತಂತಿಯಿಂದ ಪ್ರಾರಂಭವಾದ ವೀಣೆ ಕ್ರಮೇಣ ಸಾರಣಿ, ಅನುಸಾರಣಿ, ಷಡ್ಜ, ಪಂಚಮ ಎಂಬ ನಾಲ್ಕು ತಂತಿಗಳನ್ನೂ ಮೂರು ತಾಳದ ತಂತಿಗಳನ್ನೂ ಹೊಂದಿತು. ರಾಗವೊಂದನ್ನು ಪ್ರಯೋಗಿಸುವಾಗ ಆಯಾ ಸ್ಥಾಯಿಗಳಲ್ಲಿ ಬೇಕಾಗುವ ಆಯಾ ಸ್ವರಸ್ಥಾನಗಳಿಗೆ ಪ್ರತ್ಯೇಕವಾಗಿ ಮೆಟ್ಟುಗಳನ್ನಿಟ್ಟುಕೊಳ್ಳುವುದು ಅಲ್ಲಿಯವರೆಗೂ ಪದ್ಧತಿಯಾಗಿತ್ತು. ಹೀಗೆ ಪ್ರತಿಯೊಂದು ರಾಗಕ್ಕೂ ಪ್ರತ್ಯೇಕವಾದ ಸ್ವರಮೇಳವನ್ನು ಸ್ಥಾಪಿಸಬೇಕಾಗುತ್ತಿತ್ತು. ಕಾಲಕ್ರಮೇಣ ಎಲ್ಲ ಸ್ವರ

ಗಳನ್ನು ಒಂದೇ ವೀಣಾಮೇಳದಲ್ಲಿ ವ್ಯವಸ್ಥೆಗೊಳಿಸಿ, ಶಾಶ್ವತವಾಗಿ ನೆಲೆಗೊಳಿಸುವ ಸಲುವಾಗಿ ಇಪ್ಪತ್ನಾಲ್ಕು ಮೆಟ್ಟುಗಳನ್ನು ಸ್ಥಾಪಿಸಲಾಯಿತು. ಇಂತಹ ಪರಿಪೂರ್ಣರೂಪ ಪಡೆದ ವೀಣೆಯನ್ನು ಸರ್ವರಾಗಮೇಲವೀಣಾ ಎಂದು ಕರೆಯಲಾಯಿತು.

## ವಿದ್ಯಾರಣ್ಯ ಶ್ರೀಚರಣರು ಮತ್ತು ಶ್ರೀ ರಾಮಾಮಾತ್ಯರು.

ಹದಿನಾಲ್ಕನೆಯ ಶತಮಾನದಲ್ಲಿ ಹಂಪೆಯಲ್ಲಿ ವಿದ್ಯಾರಣ್ಯ ಶ್ರೀಚರಣರು ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿದರು. ರಾಜ್ಯಕ್ಕೆ ಸುವರ್ಣವೃಷ್ಟಿ, ಮಾತ್ರವಲ್ಲ ಸಂಗೀತವೃಷ್ಟಿಯನ್ನೂ ಕರೆದರು. "ಸಂಗೀತಸಾರ" ಎಂಬ ಲಕ್ಷಣಗ್ರಂಥವನ್ನೂ ರಚಿಸಿದರು. ಇವರು ವಾರಾಣಸಿಯ ತಮ್ಮ ಪರ್ಣಕುಟಿಯಲ್ಲಿ ವ್ಯಾಘ್ರಾಸನದ ಮೇಲೆ ಕುಳಿತು ವೀಣೆಯನ್ನು ನುಡಿಸುವಾಗ ಬಾಹ್ಯವೀಣೆಯ ಸ್ವರಸ್ಥಾನಗಳನ್ನು ಅಂತರ್ವೀಣೆಯ ನಾದಗಳಲ್ಲಿ ಲಯಗೊಳಿಸುತ್ತಾ, ಆಹತ-ಅನಾಹತಗಳನ್ನು ಮೇಳವಿಸಿ ನಾದಾನುಸಂಧಾನ ಮಾಡುತ್ತಾ ಅಖಂಡ ಆನಂದದಲ್ಲಿ ಮುಳುಗಲು ಸಮರ್ಥರಾಗಿದ್ದರು.

ಶ್ರೀ ವಿದ್ಯಾರಣ್ಯರ ಅನಂತರ ಹದಿನೈದನೆಯ ಶತಮಾನದಲ್ಲಿ "ಆಧುನಿಕ ವೀಣೆಯ ಆದ್ಯಾಚಾರ್ಯ" ಎಂದು ಕರೆಯಲ್ಪಟ್ಟ ಶ್ರೀ ರಾಮಾಮಾತ್ಯರು ಯೋಗಿಗಳಿಗೆ ಮಾತ್ರ ಧ್ಯಾನಗೋಚರವಾದ ಅನಾಹತನಾದವನ್ನು ಬಿಟ್ಟು, ಸರ್ವಜನಸಾಧ್ಯವಾದ ನಾರಾಯಣ ರೂಪೀ ಸಗುಣನಾದದ ಉಪಾಸನೆಯನ್ನು ಹೇಳುತ್ತಾರೆ. ತಂಬೂರಿಯ ಅಥವಾ ವೀಣೆಯ ತಂತಿಯನ್ನು ಮಿಡಿದಾಗ ಅದರಲ್ಲಿ ಶುದ್ಧ ಮಧ್ಯಮ ಪಂಚಮ ಭಾವಗಳೂ ಅಂತರ ಗಾಂಧಾರ ಭಾವವೂ ಮೇಲುಷಡ್ಜವೂ ತಮಗೆ ತಾವೇ ಹುಟ್ಟಿಕೊಂಡು ಕೇಳಿಸುವುದು ಸೂಕ್ಷ್ಮಶ್ರವಣವಿರುವ ಎಲ್ಲರಿಗೂ ತಿಳಿದ ವಿಷಯ. ಇದನ್ನು ಮೊದಲು ಗಮನಿಸಿ ಹೇಳಿದ ಶ್ರೀ ರಾಮಾಮಾತ್ಯರು ಇದನ್ನು "ಸ್ವಯಂಭೂ" ಸ್ವರಗಳೆಂದು ಕರೆದರು. ಇದನ್ನು ವೀಣಾಮೇಳದ ನಿರ್ಮಾಣಕ್ಕೆ ಉಪಯೋಗಿಸಿಕೊಂಡುದೂ ಶ್ರೀ ರಾಮಾಮಾತ್ಯರೇ. ಆದ್ದರಿಂದ ಲಕ್ಷ್ಯವಿದನಾದ ಪ್ರವೀಣಶಿಲ್ಪಿಯಿಂದ ವೀಣೆ ತಯಾರಾಗಬೇಕು. ವೀಣೆಯ ಲಕ್ಷಣವನ್ನು ವರ್ಣಿಸುವ ನಮ್ಮ ಸಂಗೀತ ಶಾಸ್ತ್ರಕಾರರಲ್ಲಿ ಶ್ರೀ ರಾಮಾಮಾತ್ಯರಿಗೆ ಅಗ್ರಸ್ಥಾನ ದೊರೆತಿದೆ. ಶ್ರೀರಾಮಾಮಾತ್ಯರು ವೀಣೆಯನ್ನು ನಿರೂಪಿಸುವಲ್ಲಿ ಶಾಶ್ವತ ಮೌಲ್ಯವುಳ್ಳ ಐದು ತಂತ್ರಗಳನ್ನು ಮೊಟ್ಟಮೊದಲಬಾರಿಗೆ ಮಂಡಿಸುತ್ತಾರೆ:

೧. ವೀಣೆಯ ತಂತಿಗಳನ್ನು ಷಡ್ಜ - ಶುದ್ಧಮಧ್ಯಮ - ಪಂಚಮ ಭಾವಗಳಿಗೆ ಶ್ರುತಿ ಮಾಡಿಕೊಳ್ಳುವುದು.

೨. (ಅ) ನುಡಿಸಬೇಕೆಂದಿರುವ ರಾಗಕ್ಕೆ ಯಾವ ಸ್ವರಗಳು ಬರುತ್ತವೆಯೋ ಅವುಗಳಿಗೆ ಮಾತ್ರ ಸಾರಿಕೆ (ಮೆಟ್ಟು)ಗಳನ್ನು ವೀಣಾದಂಡದಲ್ಲಿ ಇಟ್ಟುಕೊಳ್ಳುವುದು. ಬೇರೆ ರಾಗಗಳಲ್ಲಿ ಅವುಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳುವುದು. ಇಂತಹ ವೀಣೆಗೆ ಏಕರಾಗಮೇಲ ವೀಣೆ ಎಂದು ಹೆಸರು.

(ಆ) ಎಲ್ಲ ರಾಗಗಳಲ್ಲಿ ಬರುವ ಸ್ವರಸ್ಥಾನಗಳನ್ನು ಒಂದೇ ವೀಣಾದಂಡದಲ್ಲಿ ಸ್ಥಾಪಿಸಿ ಎಲ್ಲ ರಾಗಗಳನ್ನೂ ಒಂದೇ ವ್ಯವಸ್ಥೆಯಲ್ಲಿ ನುಡಿಸಲು ಸಾಧ್ಯವಾಗುವ ವೀಣಾಮೇಳವುಳ್ಳದ್ದು **ಸರ್ವರಾಗಮೇಲ ವೀಣೆ.**

೩. ಇವುಗಳ ಫಲವಾಗಿ ಒಂದೇ ವೀಣಾಮೇಳದಲ್ಲಿ ಮಂದ್ರ, ಮಧ್ಯ ಮತ್ತು ತಾರಗಳೆಂಬ ಮೂರು ಸ್ಥಾಯಿಗಳ ವಿಸ್ತಾರವನ್ನು ಮೀರಿ ಅನುಮಂದ್ರ ಮತ್ತು ಅತಿತಾರ ಸ್ಥಾಯಿಗಳ ವಿಸ್ತಾರ ಮೊದಲಬಾರಿ ಸೇರಿತು. ಇದರಿಂದ ಗಾನವಾದನದ ನಾದ ವ್ಯಾಪ್ತಿಯ ಆಳ ಅಗಲ ಬಹಳವಾಗಿ ಸಮೃದ್ಧವಾಯಿತು.

೪. ಕೇವಲ ಐದು ಸೋಪಾನಗಳಲ್ಲಿ ಎಲ್ಲ ಸ್ವರಸ್ಥಾನಗಳನ್ನು ನಿರ್ಣಯಿಸುವ ಉಪಾಯವನ್ನು ತಿಳಿಸಿದ್ದಾರೆ.

೫. ವೀಣಾದಂಡದ ಮೇಲೆ ನಾಲ್ಕು ತಂತಿಗಳನ್ನೂ ಬಲ ಪಾರ್ಶ್ವದಲ್ಲಿ ಮೂರು ತಂತಿಗಳನ್ನೂ ಹೇಳಿದ್ದಾರೆ. ಹಿಂದೆ ಇವುಗಳನ್ನು ತಂಬೂರಿಯ ತಂತಿಗಳಂತೆ ಶ್ರುತಿಗಾಗಿ ಬಳಸಲಾಗುತ್ತಿತ್ತು. ಈಗ ತಾಳದ ಘಾತಗಳನ್ನು ಸೂಚಿಸುವುದಕ್ಕಾಗಿ ಉಪಯೋಗಿಸಲಾಗುತ್ತಿವೆ.

ವೀಣೆಗಳನ್ನು ಕಂಡುಹಿಡಿದವರ ಅಥವಾ ಪ್ರಸಿದ್ಧಿಪಡಿಸಿದವರ ಹೆಸರುಗಳನ್ನು ವೀಣೆಗೆ ಇಡುವುದು ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ.

| | |
|---|---|
| ಪ್ರಾಚೀನ ಕಾಲದ ವೀಣೆಗಳು | ತುಂಬುರು ವೀಣೆ, ಕಶ್ಯಪ ವೀಣೆ, ರಾವಣ ವೀಣೆ. |
| ಅಭಿಮಾನೀ ದೇವತೆಯ ಹೆಸರಿನಲ್ಲಿ | ರುದ್ರವೀಣೆ, ಸರಸ್ವತೀ ವೀಣೆ, |
| ವರ್ಣನಾತ್ಮಕ ರೀತಿಯಲ್ಲಿ | ಮಹತೀ, ಶತತಂತ್ರೀ, ಕಪಿಶೀರ್ಷ್ಣಿ, ಬಾಣ. |
| ಶಾಸ್ತ್ರಪ್ರಮೇಯಗಳನ್ನು ನಿದರ್ಶಿಸಿದವರ ಹೆಸರಿನಲ್ಲಿ | ನಿಃಶಂಕವೀಣಾ, ತುಳಜೇಂದ್ರ ವೀಣಾ |
| ಪ್ರಭು ಅಥವಾ ಪೋಷಕರ ಹೆಸರಿನಲ್ಲಿ | ಅಚ್ಯುತರಾಯ ಮೇಲ ವೀಣಾ, ರಘುನಾಥೇಂದ್ರ ಮೇಲ ವೀಣಾ. |

ಹೀಗೆ ಸಂಗೀತ ಕಲಾನಿಧಿಗಳು ತಮ್ಮ ಹೊಸ ನಿರೂಪಣೆಗಳಿಗೆ ಆಳುವ ಅರಸರ ಹೆಸರನ್ನಿಟ್ಟು, ಅಮರವಾದ ತಮ್ಮ ನಿರೂಪಣೆಯಿಂದ ಅರಸರ ಹೆಸರನ್ನೂ ಭವಿಷ್ಯತ್ತಿನಲ್ಲಿ ನಿಲ್ಲಿಸಿ ಅಮರಗೊಳಿಸುವುದು ನಮ್ಮ ಸಂಗೀತ ಪರಂಪರೆಯಲ್ಲಿ ಕೃತಜ್ಞತೆ ಸಲ್ಲಿಸುವ ಒಂದು ಉತ್ತಮ ನಿದರ್ಶನ. ಇದಕ್ಕೆ ಸಾಕ್ಷಿಯಾಗಿ ಅರಸೀಕೆರೆ ತಾಲ್ಲೂಕಿನ ಚಿಕ್ಕಗಂಡಸೀ ಎಂಬ ಗ್ರಾಮದಲ್ಲಿ ದೊರತಿರುವ ಕನ್ನಡ ಶಾಸನದ ಪ್ರಕಾರ ಕ್ರಿ.ಶ.೧೫೫೦ ಆಗಸ್ಟ್ ೨೧ರಂದು ಶ್ರೀ ರಾಮಾಮಾತ್ಯನು ಅಂದಿನ ಅರಸರಾದ ಶ್ರೀ ಅಚ್ಯುತರಾಯರಿಗೆ ತಾನು ರಚಿಸಿದ ವೀಣೆಯನ್ನು ಅರ್ಪಿಸಿ 'ಅಚ್ಯುತರಾಯಮೇಳವೀಣಾ' ಎಂಬ ಹೆಸರಿನಿಂದ ಕರೆದಿದ್ದಾನೆ.

ಶ್ರೀ ರಾಮಾಮಾತ್ಯರು ಅವರ ಪೂರ್ವಾಚಾರ್ಯರಾದ ಶ್ರೀ ಶಾರ್ಙ್ಗದೇವ ಹಾಗೂ ಭರತಾಚಾರ್ಯರನ್ನು ಅಭಿವಂದಿಸಿ ಈ

ಇಬ್ಬರು ಮಹಾಲಾಕ್ಷಣಿಕರ ಸತ್ಸಂಪ್ರದಾಯವನ್ನು ತಾವು ಮುಂದುವರೆಸಿ "ಕರ್ನಾಟಕ ಸಂಗೀತದ ರಾಜಶಿಲ್ಪಿ" ಎಂಬ ಕೀರ್ತಿಗೆ ಪಾತ್ರರಾದರು. "ಸ್ವರಮೇಳ ಕಲಾನಿಧಿ" ಎಂಬ ಪುಟ್ಟದಾದರೂ ಅತ್ಯಂತ ವಿಚಾರನಿಬಿಡವಾದ ಗ್ರಂಥವನ್ನು ರಚಿಸಿದ ಕೀರ್ತಿಯೂ ಅವರದು. ಈ ಗ್ರಂಥವು ನಾದಬ್ರಹ್ಮದ ಉಪಾಸನೆ ಮತ್ತು ವಂದನೆಗಳಿಂದ ಪ್ರಾರಂಭವಾಗಿ ಅನೇಕ ಉಪಯುಕ್ತ ವಿಷಯಗಳನ್ನು ಒಳಗೊಂಡಿದೆ. ಉದಾಹರಣೆಗೆ "ವೀಣೆಯು ಹಳೆಯದಾದಷ್ಟೂ ಅದರಲ್ಲಿ ನಾದಸೌಖ್ಯವು ಹೆಚ್ಚು; ಹೆಚ್ಚು ಕಾಲ ನುಡಿಸದಿದ್ದರೆ ಅಥವಾ ಜೀವಾಳವನ್ನು ಕೂಡಿಸದಿದ್ದರೆ ಅದರ ನಾದ ಮೂಕವಾಗುತ್ತದೆ; ಸತತವಾಗಿ ನುಡಿಸುತ್ತಿದ್ದಾಗ ಅದರ ಮೇಳವನ್ನು ಆಗಾಗ ಹೊಸದಾಗಿ ಕಟ್ಟಬೇಕಾಗುತ್ತಲೇ ಇರುತ್ತದೆ. ಇಲ್ಲದಿದ್ದರೆ ಸ್ವರದ ಇಂಪು ಕ್ಷೀಣಿಸುತ್ತದೆ" ಇವೇ ಮುಂತಾದುವು. ಶ್ರೀ ರಾಮಾಮಾತ್ಯರು ತಮ್ಮ ಸಂಗೀತವನ್ನು ಕೈಹಿಡಿದು ನಡೆಸಿದ ಕಾಲ ನಿಜಕ್ಕೂ ಪರ್ವಯುಗ. ಮುಂದೆ ಇವರ ಅನಂತರ ಶ್ರೀವ್ಯಾಸರಾಯರು ತಮ್ಮ ಶಿಷ್ಯ ಚತುಷ್ಟಯರಾದ ಪುರಂದರದಾಸರು, ಕನಕದಾಸರು, ವಾದಿರಾಜರು ಮತ್ತು ವೈಕುಂಠದಾಸರ ಮೂಲಕ ಕರ್ನಾಟಕ ಸಂಗೀತವನ್ನು ಪರಿಷ್ಕರಿಸಿ ಸಮೃದ್ಧಿಗೊಳಿಸಿದರು.

## ಪುಂಡರೀಕ ವಿಠಲ ಮತ್ತು ಪಂಡಿತ ವೆಂಕಟಾಧ್ವರಿ

ಹದಿನಾರನೆಯ ಶತಮಾನದಲ್ಲಿ ಅಕ್ಬರ್ ಬಾದಷಹನ ಬೆಳ್ಗೊಡೆಯ ನೆರಳಲ್ಲಿ, ಭಾರತವು ಭಾವೈಕ್ಯವನ್ನೂ ಶಾಂತಿಯನ್ನೂ ಸಾಧಿಸಲೆತ್ನಿಸುತ್ತಿದ್ದ ಕಾಲದಲ್ಲಿ, ಔತ್ತರೇಯ ಹಾಗೂ ದಾಕ್ಷಿಣಾತ್ಯ ಸಂಗೀತ ಪದ್ಧತಿಗಳೆರಡರಲ್ಲೂ ಸಮಾನ ಪಟುಗಳಾಗಿದ್ದ ಕನ್ನಡ ನಾಡಿನ ಪುಂಡರೀಕ ವಿಠಲರು ಭಾರತೀಯ ಸಂಗೀತ ಸೌರಭವನ್ನು ದೇಶದ ಮೂಲೆ ಮೂಲೆಗಳಲ್ಲೂ ಹರಡುವ ದಿಗ್ವಿಜಯ ದೀಕ್ಷೆ ತೊಟ್ಟು, 'ರಾಗ ಚಂದ್ರೋದಯ' ಎಂಬ ಕರ್ನಾಟಕ ಸಂಗೀತದ ಪ್ರಮಾಣಭೂತವೆನಿಸಿದ ಗ್ರಂಥವನ್ನೂ 'ರಾಗಮಂಜರಿ' ಎಂಬ ಹಿಂದೂಸ್ಥಾನೀ ಸಂಗೀತ ಪದ್ಧತಿಯ ಆಧಾರಗ್ರಂಥವನ್ನೂ ರಚಿಸಿದರು. ರಾಗ ಚಂದ್ರೋದಯದ ಅತ್ಯಂತ ಮಹತ್ವಪೂರ್ಣವಾದ ಎರಡನೆಯ ಪ್ರಕರಣವಾದ ವೀಣಾಪ್ರಕರಣದಲ್ಲಿ ಪುಂಡರೀಕ ವಿಠಲರು ಸ್ವರಗಳು ಸ್ಪಷ್ಟವಾಗಿ ವ್ಯಕ್ತವಾಗುವುದು ವೀಣೆಯಲ್ಲಿ ಎಂದು ಹೇಳಿ ವೀಣೆಯ ವಿವಿಧ ಭಾಗಗಳ ಅಭಿಮಾನೀ ದೇವತೆಗಳನ್ನೂ, ವೀಣಾವಾದನದಿಂದಾಗುವ ಪಾಪನಿವಾರಣೆಯ ವಿಷಯವನ್ನೂ ಸ್ಪಷ್ಟಪಡಿಸಿದ್ದಾರೆ.


ಹದಿನೇಳನೆಯ ಶತಮಾನದಲ್ಲಿ ತಂಜಾವೂರು ವಿಜಯ ರಾಘವ ನಾಯಕ ಪ್ರಭುವಿನ ಆಳ್ವಿಕೆಯ ಕಾಲದಲ್ಲಿ ನಾದಯಜ್ಞ ಪಂಡಿತ ವೆಂಕಟಾಧ್ವರಿ ತಾವೇ ನಿರ್ಮಿಸಿದ ಹೊಸಬಗೆಯ ವೀಣೆಯನ್ನು 'ವಿಜಯರಾಘವ ಮೇಲ ವೀಣೆ' ಎಂದು ಹೆಸರಿಸಿ ತಮ್ಮ ಪ್ರಭುವಾದ ವಿಜಯರಾಘವ ನಾಯಕರಿಗೆ ಅರ್ಪಿಸಿದರು. ಇದಲ್ಲದೇ ತಮ್ಮದೇ ಅಂಕಿತದ 'ವೆಂಕಟಾಧ್ವರಿ ವೀಣೆ'ಯನ್ನು ನಿರ್ಮಿಸಿದರು. ತಮ್ಮ 'ಚತುರ್ದಂಡೀ ಪ್ರಕಾಶಿಕಾ' ಎಂಬ ಗ್ರಂಥದಲ್ಲಿ ಮೊದಲನೆಯ ಪ್ರಕರಣವಾದ 'ವೀಣಾ ಪ್ರಕರಣ'ದಲ್ಲಿ ಸಮಕಾಲೀನಸಂಗೀತವು ಬಳಸುತ್ತಿದ್ದ ಸ್ವರಗಳನ್ನು ವೀಣೆಯ ದಂಡಿಯಲ್ಲಿ ಅನಾಂತರಿಕ ವ್ಯವಸ್ಥೆಯಿಂದ ತೋರಿಸಿ, ಯಾವ ಯಾವ ತಂತಿಯಲ್ಲಿ ಯಾವ ಯಾವ ಸ್ವರವನ್ನು ನಿಯೋಜಿಸಬೇಕು, ಯಾವ ತಂತಿಯಲ್ಲಿ ಎಷ್ಟು ಮೆಟ್ಟುಗಳನ್ನಿಡಬೇಕು ಮುಂತಾದ ಮಹತ್ತರವಾದ ವಿಷಯಗಳನ್ನು ವಿಷದವಾಗಿ ವರ್ಣಿಸಿದ್ದಾರೆ.

## ಮೈಸೂರುವೀಣೆ

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳು ಕನ್ನಡ ನಾಡಿನ ಸಂಗೀತದ ಇತಿಹಾಸದಲ್ಲಿ ಅವಿಸ್ಮರಣೀಯವಾದವು. ಮೈಸೂರುವೀಣೆ ಮೈಸೂರಿನಲ್ಲಿಯೂ ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿಯೂ ತನ್ನ ಹಿರಿಮೆಯನ್ನು ಬೆಳೆಸಿ ಮೆರೆದ ಕಾಲವದು. ಸಂಗೀತದ ಮಕುಟಮಣಿ ಆದಿಪ್ಪಯ್ಯನವರ ಮನೆತನದ ವೀಣಾವಾಹಿನಿ ಇಪ್ಪತ್ತನೆಯ ಶತಮಾನದವರೆಗೂ ಹರಿದುಬಂದಿತ್ತು. ಮೈಸೂರು ಒಡೆಯರ ಆಸ್ಥಾನದಲ್ಲಿ ವೀಣೆ ವಿಜೃಂಭಿಸಿತು. ಸ್ವಯಂ ಅರಸರೇ ಸಂಗೀತವಿದ್ವಾಂಸರೂ ವೀಣಾವಾದಕರೂ ಆಗಿದ್ದರೆಂದಮೇಲೆ ಆಸ್ಥಾನವಿದ್ವಾಂಸರಲ್ಲಿ ಎಂತೆಂತಹ ಮಹನೀಯರಿದ್ದರೆಂಬುದು ಬಹುಜನರಿಗೆ ತಿಳಿದ ವಿಷಯ. ಈ ಕಾರಣಕ್ಕಾಗಿಯೇ "ವೀಣೆಯ ಬೆಡಗಿದು ಮೈಸೂರು" ಎಂಬ ಖ್ಯಾತಿಗೆ ಮೈಸೂರು ಪಾತ್ರವಾಗಿದೆ.

ಶಾರೀರ ಧರ್ಮದಲ್ಲಿ ಸ್ಥಿರತ್ವ ಹಾಗೂ ಶುದ್ಧತೆ ಇಲ್ಲದೇ ಹೋಗಬಹುದಾದ ಕಾರಣದಿಂದುಂಟಾಗುವ ನಾದವ್ಯತ್ಯಾಸದ ಯಾವ ತೊಂದರೆಯು ಗಾತ್ರಸಂಗೀತದಲ್ಲಿ ಇರುತ್ತದೆಯೋ ಅದು ವೀಣಾವಾದ್ಯದಲ್ಲಿ ಇಲ್ಲದೇ ಇರುವುದರಿಂದ ಇದರ ನಾದಶುದ್ಧತೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿರುತ್ತಾರೆ.

(ಮುಂದುವರೆಯುವುದು)



ಸರ್ವದೇವಮಯೀ ವೀಣಾ